೧೫ ಸುಳ್ಯ ವಿಧಾನಸಭಾ ಕ್ಷೇತ್ರದ ಸರ್ಕಾರಿ ಪದವಿಪೂರ್ವ ಕಾಲೇಜುಗಳಲ್ಲಿ ಉಪನ್ಯಾಸಕರ ಹುದ್ದೆಗಳನ್ನು ಭರ್ತಿ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸದೇ ಇರುವುದು

ಶ್ರೀ ಕಂಶಲ (ಸುಳ್ಯ).—ಮಾನ್ಯ ಅಧ್ಯಕ್ಷರೇ, ಸುಳ್ಯ ವಿಧಾನಸಭಾ ಕ್ಷೇತ್ರದಲ್ಲಿ ಬರುವ (೧) ಸರಕಾರಿ ಪದವೀಪೂರ್ವ ಕಾಲೇಜು, ಬೆಳ್ಳಾರೆ, ಇಲ್ಲಿ ಒಂದು ಆಂಗ್ಲ ಉನ್ನತ್ಯಾಸಕರ ಹುದ್ದೆ, ಒಂದು ಬಯಾಲಜಿ ಉಪನ್ಯಾಸಕರ ಹುದ್ದೆ, ಒಂದು ವೃತ್ತಿ ಶಿಕ್ಷಕರ ಹುದ್ದೆ. ಒಂದು ಕಾಮರ್ಸ್ ಮತ್ತು ಅಕೌಂಟಿನ್ಸಿ ಉಪನ್ಯಾಸಕರ ಹುದ್ದೆ (೨) ಸರಕಾರಿ ಪದವಿಪೂರ್ವ ಕಾಲೇಜು, ಕಾಣಿಯೂರು, ಇಲ್ಲಿ ಕಾಮರ್ಸ್ ಮತ್ತು ಅಕೌಂಟಿನ್ಸಿ, ಉಪನ್ಯಾಸಕರ ಹುದ್ದೆ–೧ ದೈಹಿಕ ಶಿಕ್ಷಕರ ಹುದ್ದೆ–೧ (೩) ಸರಕಾರಿ ಪದವಿ ಪೂರ್ವ ಕಾಲೇಜು, ಪಂಜ, ಇಲ್ಲಿ ಆಂಗ್ಲ ಉಪನ್ಯಾಸಕರ ಹುದ್ದೆ–೧, ಹಿಂದಿ ಶಿಕ್ಷಕರ ಹುದ್ದೆ–೧, (೪) ಸರಕಾರಿ ಪದವಿಪೂರ್ವ ಕಾಲೇಜು, ಸುಳ್ಯ ಇಲ್ಲಿ ಆಂಗ್ಲ ಉಪನ್ಯಾಸಕರ ಹುದ್ದೆ–೧ (೫) ಸರಕಾರಿ ಪ್ರೌಢಶಾಲೆ ಕಡಬ, ಇಲ್ಲಿ ಮಂಜೂರಾಪಾಧ್ಯಾಯರ ಹುದ್ದೆ–೧ ವಿಜ್ಞಾನ ವಿಭಾಗದ ಅಧ್ಯಾಪಕರ ಹುದ್ದೆ ೧.

ಈ ಮೇಲಿನ ಹುದ್ದೆಗಳು ಸದರಿ ಶಾಲಾ ಕಾಲೇಜುಗಳಲ್ಲಿ ಸತತವಾಗಿ ೩ ವರ್ಷಗಳಿಂದ ಖಾಲಿ ಬಿದ್ದಿರುವುದು ಮಾತ್ರವಲ್ಲ, ಸದರಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಸರಕಾರವನ್ನು, ಇಲಾಖೆಯನ್ನು ಅಧಿವೇಶನದಲ್ಲಿ ಪ್ರಶ್ನಾವಳಿ ಮೂಲಕ ಲಿಖಿತ ಮೂಲಕವಾಗಿ ಸತತವಾಗಿ ೩ ವರ್ಷಗಳಿಂದ ಕೇಳಿ ಕೊಂಡರೂ, ಸದನದಲ್ಲಿ ಸತತವಾಗಿ ೩ ವರ್ಷಗಳಿಂದ ಕ್ರಮ ಕೈಕೊಳ್ಳುವ ಭರವಸೆ ಮಾತ್ರ ಕೊಟ್ಟಿದ್ದಲ್ಲದೆ, ಈತನಕ ಈ ಮೇಲೆ ವಿವರಿಸಿದ ಒಂದು ಹುದ್ದೆಯನ್ನೂ ಭರ್ತಿ ಮಾಡಲು ಸಾಧ್ಯವಾಗಿಲ್ಲ ಈ ಕುರಿತು ಸರಕಾರ ತಳೆದ ನಿಲುವು ಏನು ? ಈ ಹುದ್ದೆಗಳನ್ನು ಭರ್ತಿ ಮಾಡಲು ಸರಕಾರ ಏನು ಕ್ರಮ ಕೈಗೊಳ್ಳುವುದು ಎಂದು ತಿಳಿಯಬಯಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ವಿದ್ಯಾಮಂತ್ರಿಗಳು ಆ ಸದನದಲ್ಲಿದ್ದಾರೆ, ವರದಿಯನ್ನು ತರಿಸಿಕೊಡುತ್ತೇವೆ.

೧೬ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಯಾಂತ್ರಿಕ ವಿಭಾಗದ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡುವಾಗ ರೋಸ್ಟರ್ ಪದ್ಧತಿಯನ್ನು ಅನುಸರಿಸದೇ ಇರುವುದು.

ಶ್ರೀ ಕೆ. ಲಕ್ಕಪ್ಪ (ಶ್ರೀ ಜಿ. ಎಸ್. ಶಿವನಂಜಪ್ಪನವರ ಪರವಾಗಿ).—ಮಾನ್ಯ ಅಧ್ಯಕ್ಷರೇ, ಬೆಂಗಳೂರು ವಿಶ್ವವಿದ್ಯಾನಿಲಯದ ವಿಶ್ವೇಶ್ವರಯ್ಯ ಇಂಜಿನಿಯರಿಂಗ್ ಕಾಲೇಜಿನ ಯಾಂತ್ರಿಕ ವಿಭಾಗದಲ್ಲಿ ಉಪನ್ಯಾಸಕರ ಹುದ್ದೆಯನ್ನು ಭರ್ತಿ ಮಾಡುವ ಪ್ರಯತ್ನದ ಪ್ರಕಟಣೆಯಲ್ಲಿ ರೋಸ್ಟರ್ ಪದ್ಧತಿಯನ್ನು ಅನುಸರಿಸದೇ ಮತ್ತು ಆದಂರತೆ ಪ್ರಕಟಣೆ ಮಾಡದೇ ಮೊದಲನೇ ದರ್ಜೆ ಬಿ.ಇ ಮತ್ತು ಎಂ. ಇ. ಪದವಿ ಮತ್ತು ಅನುಭವಗಳಿರುವ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಪ್ರಕಟಿಸಿರುತ್ತಾರೆ. ಆದರೆ ಮೊದಲನೇ ದರ್ಜೆ ಬಿ. ಇ, ಪದವಿ, ಎಂ. ಇ ಪದವಿ ಹಾಗೂ ಅನುಭವವಿರುವವರನ್ನು ಬಿಟ್ಟು ಎರಡನೇ ದರ್ಜೆ ಬಿ ಇ. ಅಭ್ಯರ್ಥಿಗಳನ್ನು ಆಯ್ಕೆ ಮಾಡಿರುವುದು ಕಾನೂನಿಗೆ ಹಾಗೂ ಪ್ರಕಟಣೆಗೆ ವಿರುದ್ಧವಾಗಿರುತ್ತದೆ.

ಮೊದಲನೇ ದರ್ಜೆಯಲ್ಲಿ ಉತ್ತೀರ್ಣರಾಗಿದ್ದವರನ್ನು ಮಾತ್ರ ಅರ್ಜಿ ಹಾಕಲು ಕರೆದಿದ್ದರೂ ಎರಡನೇದರ್ಜೆಯಲ್ಲಿ ತೇರ್ಗಡೆಯಾದವರ ಅರ್ಜಿಗಳನ್ನು ತೆಗೆದುಕೊಂಡು ಮೊದಲನೇ ದರ್ಜೆ ಎಂ.ಇ. ಪಾಸ್ ಮಾಡಿದವರನ್ನು ಹಾಗೂ ಅನುಭವ ಉಳ್ಳವರನ್ನು ಕಡೆಗಣಿಸಿ ಎರಡನೇದರ್ಜೆಯಲ್ಲಿ ಬಿ.ಇ.ಪದವಿ ತೇರ್ಗಡೆಯಾದವರನ್ನು ಆಯ್ಕೆ ಮಾಡಿರುವುದು ಆಶ್ಚರ್ಯಕರವಾಗಿದೆ. ಈ ಸಂಬಂಧದಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯದವರು ಯು. ಜಿ ಸಿ ಯ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ. ಮತ್ತು ಇದೇ ಯಾಂತ್ರಿಕ ವಿಭಾಗದಲ್ಲಿ ಸುಮಾರು ೧೫–೧೬ ವರ್ಷಗಳ ಅನುಭವವಿದ್ದು ಎಂ. ಬಿ ಪದವಿಯಲ್ಲಿ ವ್ಯಾಸಂಗ ಮಾಡಿದವರನ್ನೂ ಕಡೆಗಣಿಸಿ ಕೇವಲ ಎರಡನೇದರ್ಜೆಯಲ್ಲಿ ಬಿ. ಇ. ಪಾಸಾಗಿದ್ದವರನ್ನು ನೇಮಿಸಿರುತ್ತಾರೆ.

ಈ ಅನ್ಯಾಯವನ್ನು ಮಾನ್ಯ ಉನ್ನತ ಶಿಕ್ಷಣ ಸಚಿವರು ವಿಚಾರಣೆ ಮಾಡಿ ಕಾನೂನಿನ ಪ್ರಕಾರ ಸರಿಪಡಿಸಬೇಕೆಂದು ಒತ್ತಾಯಪೂರ್ವಕವಾಗಿ ಕೋರುತ್ತಾ, ಈ ಸದನದಲ್ಲಿ ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ರಘುಪತಿ.—ಸಂಬಂಧಪಟ್ಟ ಸಚಿವರಿಂದ ಹೇಳಿಕೆ ಕೊಡಿಸುವುದಕ್ಕೆ ಏರ್ಪಾಡು ಮಾಡುತ್ತೇನೆ.

೧೭ ಚಿಂಚೋಳಿ ತಾಲ್ಲೂಕಿನ ಅರಣ್ಯ ಹಾಗೂ ವನ್ಯಸಂಪತ್ತನ್ನು ಸಂರಕ್ಷಿಸುವುದು.

ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೇ, ಕಲ್ಬುರ್ಗಿ ಜಿಲ್ಲೆಯ ಚಿಂಚೋಳಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬೃಹತ್ ಅರಣ್ಯ ಪ್ರದೇಶವಿದ್ದು. ನಮ್ಮ ರಾಜ್ಯದ ಇಡೀ ಉತ್ತರ ಭಾಗದಲ್ಲಿ ಅತಿ ದೊಡ್ಡ ಮತ್ತು ದಟ್ಟವಾದ ಅರಣ್ಯ ಇದಾಗಿದೆ. ಅರಣ್ಯದ ಬಹಳಷ್ಟು ಭಾಗದಲ್ಲಿ ಈಗಲೂ ಅನೇಕ ಕಾಡು ಮೃಗಗಳು ವಾಸಿಸುತ್ತವೆ. ಕೆಲವು ವರ್ಷಗಳ ಹಿಂದೆ ಕುರಿ ಮಂತ್ತು ಚಿರತೆಗಳೂ ಸಹ ಇಲ್ಲಿ ಇರುತ್ತಿದ್ದವು. ಆದರೆ ಆಂಧ್ರಪ್ರದೇಶದ ಗಡಿಗೆ ಅಂಟಿಕೊಂಡಿರುವ ಈ ಅರಣ್ಯಕ್ಕೆ ಸೂಕ್ತ ಕಾವಲು ವ್ಯವಸ್ಥೆ ಇರದ ಕಾರಣ ಅನೇಕರು ಬೇಟೆಯಾಡಿ ಹುಲಿ, ಚಿರತೆಗಳ ಸಂಖ್ಯೆ ಅತಿ ವಿರಳವಾಗಿದೆ. ಆದರೆ ಈಗಲೂ ಸಹ ಸಾವಿರಾರು ಸಂಖ್ಯೆಯಲ್ಲಿ ವಿವಿಧ ಜಾತಿಯ ಜಿಂಕೆಗಳು ಹಾಗೂ ಗುಂಪು ಗುಂಪುಗಳಲ್ಲಿ ನವಿಲುಗಳು ದಾರಿ ಹೋಕರಿಗೆ ಸಂದರ್ಶನ ಕೊಡುತ್ತವೆ. ಇದಲ್ಲದೆ, ಮೊಲ, ನರಿ ಹಾಗೂ ತೋಳಗಳು ಸಾಕಷ್ಟು ಪ್ರಮಾಣದಲ್ಲಿ ನೋಡಲು ಸಿಗುತ್ತವೆ. ಇಲ್ಲಿನ ಅರಣ್ಯ ನೈಸರ್ಗಿಕವಾಗಿ ಅತಿ ಸುಂದರವಾಗಿದ್ದು, ಇಲ್ಲಿ ಎಲ್ಲಾ ಕಾಡುಪ್ರಾಣಿಗಳಿಗೆ ಅನುಕೂಲವಾಗುವಂತೆ ಸಾಕಷ್ಟು ನದಿ ನಾಲೆಗಳು ಹಾಗೂ ಚಂದ್ರಪಳ್ಳಿ ನೀರಾವರಿ ಯೋಜನೆ ಸಹ ಆವರಿಸಿಕೊಂಡಿದೆ. ಸದರಿ ಅರಣ್ಯದಲ್ಲಿ ಹಿಂದೊಮ್ಮೆ ಜಿಂಕೆಧಾಮ ಮಂಜೂರಾಗಿತ್ತೆಂದು ತಿಳಿದುಬರುತ್ತದೆ. ಆದರೆ ಯಾವ ಕಾರಣಗಳಿಂದಾಗಿ ಈ ಯೋಜನೆಯನ್ನು ಕೈಬಿಡಲಾಗಿದೆ ತಿಳಿಯದು. ಈಗಲಾದರೂ ಸರ್ಕಾರ ಈ ಪ್ರದೇಶದಲ್ಲಿ ಜಿಂಕೆಧಾಮ ಹಾಗೂ ಹುಲಿ ಧಾಮಗಳನ್ನು ಸ್ಥಾಪಿಸಲು ಕ್ರಮ ಕೈಗೊಳ್ಳಬೇಕಾಗಿ ವಿನಂತಿಸುತ್ತೇನೆ.

ಶ್ರೀ ಜಿ. ಎಸ್. ಬಾಗಲಕೋಟೆ (ಅರಣ್ಯ ಸಚಿವರು).—ಮಾನ್ಯ ಅಧ್ಯಕ್ಷರೇ, ಚಿಂಚೋಳಿ ತಾಲ್ಲೂಕಿನಲ್ಲಿ ಅರಣ್ಯವಿರುವುದು ಹಾಗೂ ಇಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ವನ ಹಾಗೂ ವನ್ಯ ಸಂಪತ್ತು ಇರುವುದು ನಿಜ. ಹಿಂದೆ ಅಲ್ಲೊಂದು ಮುಕ್ಕಳ ವಿಹಾರಧಾಮ, ಮಂತ್ತು ಸಣ್ಣ ಮೃಗಾಲಯವನ್ನು ತೆರೆಯುವ ಪ್ರಸ್ತಾವನೆ ಇತ್ತು. ಆದರೆ ಮೃಗಾಲಯಕ್ಕೆ ಆ ಸ್ಥಳ ಅರಣ್ಯ ಪ್ರದೇಶವಾಗಿರುವುದರಿಂದ, ಸೂಕ್ತ ಸ್ಥಳವಾಗಿಲ್ಲವೆಂದು ಈ ಪ್ರಸ್ತಾವನೆಯನ್ನು ಕೈಬಿಡಲಾಯಿತು. ಈ ಪ್ರದೇಶದಲ್ಲಿ ಹುಲಿಗಳು ಅತಿ ವಿರಳವಾದ್ದರಿಂದ ಈ ಪ್ರದೇಶವು ಹುಲಿಧಾಮವನ್ನಾಗಿ ಮಾಡಲು ಸೂಕ್ತವಲ್ಲವೆಂದು ಪರಿಗಣಿಸಲಾಯಿತು. ತೋಳ, ಜಿಂಕೆ, ಮೊಲ, ನವಿಲು ಇತ್ಯಾದಿ ಪ್ರಾಣಿಗಳು ಮಾತ್ರ ಇಲ್ಲಿ ಕಾಣಿಸುತ್ತವೆ. ಈ ಪ್ರದೇಶವನ್ನು ವನ್ಯ ಪ್ರಾಣಿ ಅಭಯಾರಣ್ಯವನ್ನಾಗಿ ಘೋಷಿಸಿದಲ್ಲಿ ಈ ಪ್ರಾಣಿಗಳಿಗೆ ಹೆಚ್ಚಿನ ರಕ್ಷಣೆ ಕೊಡಬಹುದು. ಇದು ಸರ್ಕಾರದ ಪರಿಶೀಲನೆಯಲ್ಲಿದೆ.

ಅಧ್ಯಕ್ಷರು.—ಈಗ ಶುಕ್ರವಾರ ಶಿಷ್ಟಾಚಾರ ನಿಯಮವಾದ ಮೇರೆಗೆ ಶ್ರೀ ಬಿ. ಎಂ. ಇದಿನಬ್ಬರವರು ಕೇಳಿದ ವಿಚಾರಕ್ಕೆ ಮಾನ್ಯ ಮಂತ್ರಿಗಳು ಈಗ ಉತ್ತರ ಕೊಡುತ್ತಾರೆ.

ಶ್ರೀ ಎಂ. ರಘುಪತಿ (ಮೀನುಗಾರಿಕೆ ಮತ್ತು ಬಂದರು ಸಚಿವರು).—ಮಾನ್ಯ ಅಧ್ಯಕ್ಷರೇ ಸರ್ಕಾರದ ಅಭಿಪ್ರಾಯದ ಪ್ರಕಾರ ಮೀನಿನ ಕ್ಷಾಮದ ಪರಿಸ್ಥಿತಿ ಕಂಡುಬಾರದ ಕಾರಣ ಕಳೆದೆರಡು ವರ್ಷಗಳಲ್ಲಿ ಮೀನಿನ ಕ್ಷಾಮದ ವರ್ಷವೆಂದು ಘೋಷಿಸುವುದಿಲ್ಲ. ಹಿಂದಿನ ವರ್ಷಗಳಿಗೆ ಹೋಲಿಸಿದಲ್ಲಿ ಮೀನಿನ ಉತ್ಪಾದನೆ ಕಡಿಮೆಯಾಗಿದ್ದರೂ ಕೂಡ ಮೀನಿನ ಬೆಲೆ ಹೆಚ್ಚಿದುದಾದರಿಂದ ಬಂದ ಆದಾಯವೂ ಹೆಚ್ಚಿರುತ್ತದೆ. ಆದರೂ ಸಹ ಮೀನಿನ ಕ್ಷಾಮದ ಪರಿಸ್ಥಿತಿಯ ಕುರಿತು ಕೂಲಂಕುಷ ಅಧ್ಯಯನ ನಡೆಸಲು ಹಾಗೂ ಈ ಬಗ್ಗೆ ಸೂಕ್ತ ಶಿಫಾರಸ್ಸುಗಳನ್ನು ಮಾಡಲು ಸರ್ಕಾರವು ಮೀನುಗಾರಿಕಾ ಕಾಲೇಜಿನ ನಿರ್ದೇಶಕರಾದ ಪ್ರೊಫೆಸರ್ ಎಚ್. ಪಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಿದ್ದು, ಅವರಿಂದ ವರದಿಯನ್ನು ನಿರೀಕ್ಷಿಸಲಾಗಿದೆ. ವರದಿಯು ಬಂದಕೂಡಲೇ ಇದನ್ನು